ಸಾಕ್ಷಿಯನ್ನು ದಿಃ 13-01-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀ ಆರ್ ಎಸ್ ಎಚ್ ವಕೀಲರಿಂದಃ (ಪ್ರತಿವಾದಿ ನಂ.4 ರ ಪರವಾಗಿ)**

ಪ್ರತಿವಾದಿ ನಂ.1 ಜಿನ್ನತ್ ಬೇಗಂ ನನ್ನ ಅಕ್ಕ. ಪ್ರತಿವಾದಿ ನಂ.2 ಇವರು ಪ್ರತಿವಾದಿ ನಂ.4 ಇವರಿಗೆ ಆಸ್ತಿ ಮಾರಿದ ಖರೀದಿ ಪತ್ರಕ್ಕೆ ಪ್ರತಿವಾದಿ ನಂ.1 ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಖರೀದಿ ಪತ್ರಕ್ಕೆ ಪ್ರತಿವಾದಿ ನಂ.1 ಸಹಿ ಮಾಡಿದ ವಿಷಯ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ನಂ.4 ದಾವಾ ಆಸ್ತಿ ಖರೀದಿಸಿದಾಗ ಅದು ತಗ್ಗುಗಳಿಂದ ಕೂಡಿತ್ತು ಎಂದರೆ ಗೊತ್ತಿಲ್ಲ. ಪ್ರತಿವಾದಿ ನಂ.4 ಜಮೀನು ಖರೀದಿಸಿದ ನಂತರ ಸಾಕಷ್ಟು ಖರ್ಚು ಮಾಡಿ, ಸಮತಟ್ಟು ಮಾಡಿ ಅಭಿವೃದ್ಧಿ ಪಡಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ 4 ನೇ ಪ್ರತಿವಾದಿ ಕೆರೆ ಕಟ್ಟಿ, ನೀರಾವರಿ ಮಾಡಿದ್ದಾನೆ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಆ ಜಮೀನಿನ್ನೆ ನೋಡಿಲ್ಲ ಎಂದು ಹೇಳುತ್ತಾರೆ. ಸದರಿ ಜಮೀನು ಅಭಿವ್ದದ್ಧಿ ಪಡಿಸಲು ಪ್ರತಿವಾದಿ ನಂ.4 ಸುಮಾರು 20 ಲಕ್ಷ ಖರ್ಚು ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಮತ್ತು ಪ್ರತಿವಾದಿ ನಂ.1 ಮತ್ತು 2 ಶಾಮೀಲಾಗಿ ದಾಖಲೆಗಳನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಮತ್ತು ಪ್ರತಿವಾದಿ ನಂ.1 ಮತ್ತು 2 ಶಾಮೀಲಾಗಿ ಪ್ರತಿವಾದಿ ನಂ.3 ಹೆಸರಿಗೆ ಖೊಟ್ಟಿಯಾಗಿ ದಾನಪತ್ರ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.4 ರವರಿಗೆ ಜಮೀನು ಮಾರಿದ ನಂತರ ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.1 ಮತ್ತು 2 ಸೇರಿ ದಾವಾ ಜಮೀನನ್ನು ಪ್ರತಿವಾದಿ ನಂ.5 ಮತ್ತು 6 ರವರಿಗೆ ಮಾರಿದ ನಂತರ ಪ್ರತಿವಾದಿ ನಂ.4 ರವರಿಗೆ ಜಮೀನು ಮಾರಿದ ವಿಷಯ ಗೊತ್ತಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ನಂ.2 ರವರು 2005 ರಲ್ಲಿ ಪ್ರತಿವಾದಿ ನಂ.4 ರವರಿಗೆ ಆಸ್ತಿ ಮಾರಿದ ವಿಷಯ ನನಗೆ ಗೊತ್ತಿತ್ತು ಎಂದರೆ

ಸರಿಯಲ್ಲ. ಖೊಟ್ಟಿ ದಾಖಲೆ ಸೃಷ್ಟಿಸಿದ್ದಾರೆ ಎಂದು ಪ್ರತಿವಾದಿಯರ ವಿರುದ್ಧ ದೂರು ಸಲ್ಲಿಸಲು ಹೋಗಿದ್ದೆ ಆದರೆ ಅವರು ನ್ಯಾಯಾಲಯಕ್ಕೆ ಹೋಗಲು ಸೂಚಿಸಿದ್ದರು ಎಂದು ಹೇಳುತ್ತಾರೆ. ಪೊಲೀಸರಿಗೆ ದೂರು ಸಲ್ಲಿಸಿದ ಬಗ್ಗೆ ದಾಖಲೆ ಇಲ್ಲ ಆದರೆ ಬಾಯಿ ಮಾತಿನಲ್ಲಿ ಪೊಲೀಸರು ನಮ್ಮನ್ನು ವಾಪಾಸ್ಸು ಕಳುಹಿಸಿದ್ದಾರೆ. ನಾನು ಆ ರೀತಿ ದೂರು ಸಲ್ಲಿಸಲು ಪೊಲೀಸರ ಬಳಿ ಹೋಗಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ನಂ.4 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**(ಪ್ರತಿವಾದಿ ನಂ.1 ಮತ್ತು 2 ಏಕತರ್ಫಿ ಇದ್ದು, ಪ್ರತಿವಾದಿ ನಂ.3, 5, 6 ಗೈರು ಹಾಜರಿದ್ದು, ಯಾರೂ ಪ್ರತಿನಿಧಿಸದ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.